MYSORE DIVISION

| | | |
|---|---|---|
| 1. Mysore | - | 1338 |
| 2. Mandya | - | 528 |
| 3. Kodagu | - | 5560 |
| 4. Mangalore | - | 3436 |
| 5. Chickmagalur | | 752 |
| 6. Hassan | - | 456 |
| Total | | 12070 |

ರಾಜ್ಯವು ರೈತರಿಗೆ ಸರಬರಾಜು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ

**1561 (2136)** ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) 1990-91ಮತ್ತು 1991-92ರ ಸಾಲಿನಲ್ಲಿ ರಾಜ್ಯದ ರೈತರಿಗೆ ಸರಬರಾಜು ಮಾಡಿದ ರಾಸಾಯನಿಕ ಗೊಬ್ಬರ ಮತ್ತು ಪರಿಕರಗಳ ಒಟ್ಟು ಪ್ರಮಾಣವೆಷ್ಟು ?(ದಯವಿಟ್ಟು ಜಿಲ್ಲಾವಾರು ವಿವರ ಒದಗಿಸುವುದು) ;

ಆ) ಒಟ್ಟು ವೆಚ್ಚ, ಜಿಲ್ಲಾವಾರು ವಿವರ ಒದಗಿಸುವುದು ;

ಇ) ರೈತರಿಗೆ ನೀಡಿದ ಸಹಾಯಧನದ ಮೊತ್ತ (ಜಿಲ್ಲಾವಾರು ವಿವರ ಒದಗಿಸುವುದು)?

ಶ್ರೀ ಎನ್.ಚಿಕ್ಕೇಗೌಡ (ಕೃಷಿ ಸಚಿವರು):-

ಅ)

| ಸರಬರಾಜು ಮಾಡಿದ ಗೊಬ್ಬರದ ಪ್ರಮಾಣ | | ಸರಬರಾಜು ಮಾಡಿದ ಕೃಷಿ ಪರಿಕರಗಳ ಚೀಲಗಳ ಪ್ರಮಾಣ | | |
|---|---|---|---|---|
| 1990-91 | - | ಇಲ್ಲ | - | 58,313 ನಂ |
| 1991-92 | - | ಇಲ್ಲ | - | 59,810 ನಂ |

(ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ)

ಆ) ರೂ.61,982 ಲಕ್ಷಗಳು.
(ಜಿಲ್ಲಾವಾರು ವಿವರ ಲಗತ್ತಿಸಿದೆ)

ಇ) ಮೇಲೆ ತಿಳಿಸಿದ ಚೀಲಗಳನ್ನು ರೈತರಿಗೆ ಉಚಿತವಾಗಿ ಹಂಚಲಾಗಿದೆ.

ಸರ್ಕಾರಿ ಜಮೀನಿನ ಅಕ್ರಮ ಸಾಗುವಳಿಯ ಸಕ್ರಮ:

**1562 (2137)** ಶ್ರೀ ಬಸವರಾಜ ರಾಯರೆಡ್ಡಿ, (ಯಲ್ಬುರ್ಗ)

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಸಾರ್ವಜನಿಕರು ಕೃಷಿಗಾಗಿ ಎಷ್ಟು ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರವನ್ನು ನೀಡುವುದು);

ಆ) ಸರ್ಕಾರವು ಇಂತಹ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸುವುದೇ ;

ಇ) ಹಾಗಿದ್ದರೆ, ಯಾವಾಗ ;